153 ಸೇ೭ ದಿ:-72: (53) LRR 240621

**ಶ್ರೀ ತಿಪ್ಪಣ್ಣಪ್ಪ ಕಮಕನೂರ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ**

---

## ಸೂಚನೆ:-

**ನೀಲಿಕ್ರಾಂತಿ ಯೋಜನೆ - ಮೀನು ಕೃಷಿ ಕೊಳ ನಿರ್ಮಾಣಕ್ಕೆ ಮತ್ತು ಹೂಡಿಕೆ ವೆಚ್ಚಗಳಿಗೆ ಸಹಾಯ ಯೋಜನೆಯ ಬೆಣ್ಣೆತೊರೆ ನಾಲಾ ಭಾಗದಲ್ಲಿ, ಚಿತ್ತಾಪುರ ಮತ್ತು ಕಾಳಗಿ ತಾಲ್ಲೂಕಿನಲ್ಲಿ ಆ ಕ್ಷೇತ್ರದ ವ್ಯಾಪ್ತಿಗೆ ಒಳಪಡದೆ ಇರುವ ವ್ಯಕ್ತಿಗಳು ಸುಳ್ಳು ವಿಳಾಸ ನೀಡಿ ಫಲಾನುಭವಿಗಳಾಗಿರುವ ಬಗ್ಗೆ ಮತ್ತು ಇದರಿಂದ ನೈಜ ಫಲಾನುಭವಿಗಳು ಯೋಜನೆಯಿಂದ ವಂಚಿತರಾಗಿರುವ ಬಗ್ಗೆ.**

## ಹೇಳಿಕೆ:-

ನೀಲಿಕ್ರಾಂತಿ ಯೋಜನೆಯಡಿ ಹೊಸದಾಗಿ ಮೀನು ಕೃಷಿ ಕೊಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚಗಳಿಗೆ ಸಹಾಯಧನ ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ಘಟಕ ವೆಚ್ಚ (ಕೊಳ ನಿರ್ಮಾಣ 7 ಲಕ್ಷ ಹೂಡಿಕೆ ವೆಚ್ಚ 4.ಲಕ್ಷ)ರಲ್ಲಿ ಶೇ 40% ರಷ್ಟು ಸಹಾಯಧನ ನೀಡಲು ಹಾಗೂ ಪ.ಜಾ/ಪ.ಪಂ/ಮಹಿಳೆಯರುಗಳಿಗೆ ಶೇ 60% ಸಹಾಯಧನ ನೀಡಲು ಅವಕಾಶವಿದೆ.

ಯೋಜನೆಯ ಮಾರ್ಗಸೂಚಿಯನ್ವಯ ಅರ್ಜಿದಾರರು ತಮ್ಮ ಸ್ವಂತ ಜಮೀನಿನಲ್ಲಿ/ ಮೀನುಗಾರಿಕೆಗೆ ಯೋಗ್ಯವಾದ ಜಮೀನುಗಳನ್ನು ಗುತ್ತಿಗೆ ಪಡೆದು ಹೂಡಿಕೆ ವೆಚ್ಚ ಭರಿಸಿದಲ್ಲಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹತೆ ಹೊಂದಿರುತ್ತಾರೆ.

ನೀಲಿಕ್ರಾಂತಿ ಯೋಜನೆಯ ಮಾರ್ಗಸೂಚಿಯನ್ವಯ ಸಹಾಯಧನ ಪಡೆದಿರುವ ಫಲಾನುಭವಿಗಳು ಮೂಲತಃವಾಗಿ ಬೇರೆ ಪ್ರದೇಶದ ನಿವಾಸಿಗಳಾಗಿದ್ದರೂ ಸಹ, ಕಾಳಗಿ ತಾಲ್ಲೂಕಿನಲ್ಲಿ ಮೀನುಗಾರಿಕೆಗೆ ಯೋಗ್ಯವಾದ ಜಮೀನನ್ನು ಯೋಜನೆಯ ನಿಯಮಾನುಸಾರ ಭೂಮಿ ಮಾಲೀಕರಿಂದ ಗುತ್ತಿಗೆಗೆ ಪಡೆದು ದಾಖಲಾತಿ ಸಲ್ಲಿಸಿರುವುದರಿಂದ ಇದನ್ನು ಪರಿಗಣಿಸಿ ಮೀನು ಕೃಷಿ ಕೊಳ ನಿರ್ಮಿಸಿರುವುದಕ್ಕೆ ಸಹಾಯಧನ ಹಾಗೂ ಹೂಡಿಕೆ ವೆಚ್ಚಕ್ಕೆ ಸಹಾಯಧನ ಒಟ್ಟು ರೂ.94.313 ಲಕ್ಷ ಮಂಜೂರು ಮಾಡಲಾಗಿದೆ.

ನೀಲಿಕ್ರಾಂತಿ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚಗಳಿಗೆ ಸಹಾಯಧನ ಪಡೆದ ಫಲಾನುಭವಿಗಳ ವಿವರ **ಅನುಬಂಧ-1** ರಲ್ಲಿ ನೀಡಲಾಗಿದೆ.

ಈ ಫಲಾನುಭವಿಗಳು ಬೆಣ್ಣೆತೋರಾ ಭಾಗದಲ್ಲಿ ಗುತ್ತಿಗೆ ಮೇಲೆ ಪಡೆದ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಿಸಿಕೊಂಡಿರುತ್ತಾರೆ.

ಸ್ವಂತ ಜಮೀನು ಹೊಂದಿರುವ ಅಥವಾ ಗುತ್ತಿಗೆ ಆಧಾರದ ಮೇಲೆ ಜಮೀನು ಪಡೆದು ಕೊಳ ನಿರ್ಮಾಣ ಮಾಡಲು ಸಹಾಯಧನ ಕೋರಿ ಅರ್ಜಿ ಸಲ್ಲಿಸಿದ ಎಲ್ಲರಿಗೂ ಸಹಾಯಧನ ನೀಡಲಾಗುತ್ತದೆ.

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಸಂಖ್ಯೆ: ಪಸಂಮೀ ಇ-133 ಮೀಇಯೋ 2024



ile No. AHF/133/FSFS/2024-AHF_SEC_A_FISH-Animal Husbandary Fisheries sec (Computer No. 1460002)

# ಅನುಬಂಧ-1

## ನೀಲಿಕ್ರಾಂತಿ ಯೋಜನೆಯಡಿಯಲ್ಲಿ ಮೀನು ಕೃಷಿಕೊಳ ನಿರ್ಮಾಣ ಹಾಗೂ ಹೂಡಿಕೆ ವೆಚ್ಚ ಸಹಾಯಧನ ಪಡೆದ ಫಲಾನುಭವಿಗಳ ವಿವರ

ತಾಲ್ಲೂಕು: ಕಾಳಗಿ

ಗ್ರಾಮ: ಹೆರೂರ (ಕೆ)

| ಕ್ರ.ಸಂ | ಫಲಾನುಬವಿಯ ಹೆಸರು | ಸರ್ವೇ ನಂ | ವರ್ಗ | ಕೊಳದ ವಿಸ್ತೀರ್ಣ (ಹೆ) ಗಳಲ್ಲಿ | ಸಹಾಯಧನ ರೂ. ಲಕ್ಷಗಳಲ್ಲಿ |
|---|---|---|---|---|---|
| 1 | ಶ್ರೀಮತಿ ಲಕ್ಷ್ಮೀಬಾಯಿ ಗಂಡ ಗುರುಶಾಂತಪ್ಪ ಸಾ// ವಿ.ಕೆ. ಸಲಗರ ತಾ//ಆಳಂದ | 73/2 | ಸಾಮಾನ್ಯ (ಮಹಿಳೆ) | 2.00 | 667 |
| 2 | ಶ್ರೀಮತಿ ಶಾಂತಬಾಯಿ ಗಂಡ ಕುಪೇಂದ್ರ ಸಾ//ಬೋದನ ತಾ//ಆಳಂದ | 73/1 | ಸಾಮಾನ್ಯ (ಮಹಿಳೆ) | 1.60 | 787 |
| 3 | ಶ್ರೀಮತಿ ಭವಾನಿ ಗಂಡ ಸಂಜೀವುಕುಮಾರ ಸಾ// ಹೆರೂರ (ಕೆ) ತಾ// ಕಾಳಗಿ | 79 | ಸಾಮಾನ್ಯ (ಮಹಿಳೆ) | 2.00 | 1020 |
| 4 | ಶ್ರೀಮತಿ ವಿಮಲಾಬಾಯಿ ಗಂಡ ಸಿದ್ಧಣ್ಣಾ ಕಲಬುರಗಿ | 79 | ಸಾಮಾನ್ಯ (ಮಹಿಳೆ) | 2.00 | 1020 |
| 5 | ಶ್ರೀಮತಿ ರಾಜೇಶ್ವರಿ ಸಾವಳಗಿ ಗಂಡ ಬಸವರಾಜ ಸಾವಳಗಿ ಕಲಬುರಗಿ | 73/2 | ಸಾಮಾನ್ಯ (ಮಹಿಳೆ) | 1.31 | 667 |
| 6 | ಶ್ರೀಮತಿ ಶಿವಲೀಲಾ ಗಂಡ ಸಾ// ಝೂಪೂರ ತಾ// ಕಲಬುರಗಿ | 75/2 | ಸಾಮಾನ್ಯ (ಮಹಿಳೆ) | 1.73 | 882 |
| 7 | ಶ್ರೀಮತಿ ಲಕ್ಷ್ಮೀ2.00 ಗಂಡ ಶಂಭುಲಿಂಗ ಮೈಸಲಗಾ | 75/3 | ಸಾಮಾನ್ಯ (ಮಹಿಳೆ) | 2.00 | 1020 |
| 8 | ಶ್ರೀ ಪೃಥ್ವಿರಾಜ ತಂದೆ ಶಿವಪುತ್ರಪ್ಪ ಬಿರಾದರ ಕಲಬುರಗಿ | 75/1 | ಸಾಮಾನ್ಯ | 2.00 | 660 |
| 9 | ಶ್ರೀಮತಿ ಪ್ರಿಯಾಂಕ ಗಂಡ ಪೃಥ್ವಿರಾಜ ಬಿರಾದರ ಕಲಬುರಗಿ | 75/1 | ಸಾಮಾನ್ಯ (ಮಹಿಳೆ) | 2.00 | 1020 |



File No. AHF/133/FSFS/2024-AHF_SEC_A_FISH-Animal Husbandary Fisheries sec (Computer No. 1460002)

| | | | | | |
|---|---|---|---|---|---|
| 10 | ಶ್ರೀಮತಿ ವಿಜಯಶ್ರೀ ಗಂಡ ಮಂಜೂನಾಥ ಕಲಬುರಗಿ | 75/2 | ಸಾಮಾನ್ಯ (ಮಹಿಳೆ) | 2.00 | 1020 |
| 11 | ಶ್ರೀಮತಿ ಇಂದುಕಲಾ ಗಂಡ ಶಿವಪುತ್ರಪ್ಪ | 73/3 | ಸಾಮಾನ್ಯ (ಮಹಿಳೆ) | 1.31 | 668 |
| | | | | 19.95 | 94.313 |

ಮೀನುಗಾರಿಕೆ ನಿರ್ದೇಶಕರು



File No. AHF/133/FSFS/2024-AHF_SEC_A_FISH-Animal Husbandary Fisheries sec (Computer No. 1460002)